# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

## ಸಿ. ಸಿ. ನಂ.1157/2024

**ಫಿರ್ಯಾದಿ :** ಸಿ ರವಿ ಬಿನ್ ಲೇಟ್ ಚಿಕ್ಕಮಲ್ಲೇಗೌಡ
54 ವರ್ಷ, ವಾಸಃ ಮನೆ ನಂ.4859, 2 ನೇ ಕ್ರಾಸ್,
ಚರ್ಚ್ ರಸ್ತೆ, ನೀಲಕಂಠನಗರ
ನಂಜನಗೂಡು ತಾಲ್ಲೂಕು,

**ವಿರುದ್ಧ**

**ಆರೋಪಿ :** ರಾಮು ಕೆ ಎಸ್ ಬಿನ್ ಸಿದ್ದಯ್ಯ
39 ವರ್ಷ, ಮನೆ ನಂ.36,
ಚಾಮಲಾಪುರದಹುಂಡಿ ರಸ್ತೆ, ಕೊರೆಹುಂಡಿ ಗ್ರಾಮ,
ನಂಜನಗೂಡು ಟೌನ್

## ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

**ಪ್ರಶ್ನೆ 1ಃ** ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

**ಪ್ರಶ್ನೆ 2ಃ** ಪ್ರಾಸಾ-1 ಸಿ ರವಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ದರದ್ದು ನಿಮಿತ್ತ ಅಂದರೆ ಗೃಹೃಕೃತ್ಯದ ಖರ್ಚಿಗಾಗಿ ಹಾಗು ಕೈ ಸಾಲ ತೀರಿಸುವುದಕ್ಕು ಹಾಗು ಕಾನೂನುಬದ್ದ ಅವಶ್ಯಕತೆಗಳಿಗಾಗಿ ಪಿರ್ಯಾದುದಾರರಿಂದ 2024 ನೇ ಇಸವಿ ಜುಲೈ ತಿಂಗಳ ಮೂರನೇ ವಾರದಲ್ಲಿ ರೂ 2,00,000/- ಗಳನ್ನು ಸಾಲವಾಗಿ ಪಡೆದು, ಸದರಿ ಸಾಲವನ್ನು 3 ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 3** ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ರೂ 2,00,000/- ಗಳ ಸಾಲದ ಬಾಬ್ತುವಿಗೆ ನೀವು ನಿಮ್ಮ ಉಳಿತಾಯ ಖಾತೆಯಿರುವ ಸಿ ಎಸ್ ಬಿ ಬ್ಯಾಂಕ್, ನಂಜನಗೂಡು ಶಾಖೆಯ ಚಕ್ ನಂಃ100144 ಕ್ಕೆ ರೂ.2,00,000/-ಗಳನ್ನು ದಿನಾಂಕಃ30.09.2024 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕುಗಳನ್ನು ನಗದೀಕರಿಸಿಕೊಳ್ಳಲು ಉಳಿತಾಯ ಖಾತೆಯಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ

ಬ್ಯಾಂಕಿನವರು **"Insufficient Balance"** ಎಂಬ ಹಿಂಬರಹದೊಂದಿಗೆ ದಿಃ 14.10.2024 ರಂದು ನಗಧೀಕೃತಗೊಳ್ಳದೆ ವಾಪಸ್ಸು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 4** ಪ್ರಾಸಾ-1 ರವರು ಮುಂದುವರೆದು ಪಿರ್ಯಾದಿ ಪರ ವಕೀಲರ ಮೂಲಕ ದಿಃ16.10.2024 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸು ಆರೋಪಿಯಾದ ನಿಮಗೆ ದಿಃ26.10.2024 ರಂದು ಜಾರಿಯಾಗಿದ್ದು, ಆದರೂ ಸಹಾ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

**ಪ್ರಶ್ನೆ 5** ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

**ಪ್ರಶ್ನೆ 6ಃ** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 02.02.2026 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು.